RNU AIR DHARWAD

MAY 12, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಇಂದು, ಬುದ್ಧ ಪೂರ್ಣಿಮೆ: ನಾಡಿನಾದ್ಯಂತ ಶ್ರದ್ಧಾ ಭಕ್ತಿಯ, ವೈಶಾಖ ಜಯಂತ್ಯುತ್ಸವ.**
- **'ಆಪರೇಷನ್ ಸಿಂಧೂರ್': ಉಗ್ರರ ಹೆಡೆಮುರಿ ಕಟ್ಟಲು, ಯೋಜಿತ ಕಾರ್ಯಾಚರಣೆ – ಲೆಫ್ಟಿನೆಂಟ್ ಜನರಲ್, ರಾಜೀವ್ ಘಾಯ್.**
- **ದೇಶದ ರಕ್ಷಣಾ ಪಡೆಗಳು, ಸೇನಾ ಮುಖ್ಯಸ್ಥರಿಗೆ, ಪ್ರಥಮ ಬಾರಿಗೆ ಮುಕ್ತ ಸ್ವಾತಂತ್ರ್ಯ – ಪ್ರಲ್ಹಾದ ಜೋಶಿ.**
- **ನೈಋತ್ಯ ಮುಂಗಾರು; ವಾಡಿಕೆಗಿಂತ ಐದು ದಿನ ಮುಂಚೆ, ಕೇರಳ ಕರಾವಳಿ ತಲುಪುವ ನಿರೀಕ್ಷೆ.**

<><><>

**ಈಗ ವಾರ್ತೆಗಳ ವಿವರ**

<><><>

**2 ಸಾವಿರದ 2 ನೂರಾ 69ನೇ, ಬುದ್ಧ ಪೂರ್ಣಿಮೆ ಅಥವಾ ಬುದ್ಧ ಜಯಂತಿ, ವೈಶಾಖ ಜಯಂತ್ಯುತ್ಸವವನ್ನು, ಇಂದು ನಾಡಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಬೌದ್ಧ ಧರ್ಮದ ಸಂಸ್ಥಾಪಕರಾದ, ಭಗವಾನ್ ಶ್ರೀ ಗೌತಮ ಬುದ್ಧ ಅವರ, ಬದುಕಿನ ಮಹತ್ವದ ಘಟ್ಟಗಳಾದ, ಜನನ, ಜ್ಞಾನೋದಯ ಹಾಗೂ ಮಹಾಪರಿನಿರ್ವಾಣ ಸೇರಿದಂತೆ, ಭಗವಾನ್ ಬುದ್ಧ ಬೋಧಿಸಿದ ತತ್ವಗಳನ್ನು, ಶ್ರೀಸಾಮಾನ್ಯರಿಗೆ ತಿಳಿಸಲು, ಈ ದಿನ ಬೌದ್ಧ ಮಂದಿರಗಳಲ್ಲಿ ವಿಶೇಷ ರೀತಿಯಲ್ಲಿ, ಆಚರಿಸಲಾಗುತ್ತದೆ.**

<><><>

**ವೈಶಾಖ ಮಾಸದ ಹುಣ್ಣಿಮೆಯ ಈ ದಿನ, ಬಿಹಾರದ ಬೋಧ ಗಯಾ, ಲುಂಬಿನಿ ಹಾಗೂ ಸಾರಾನಾಥದಲ್ಲಿ ಹಬ್ಬವಾಗಿ, ಬುದ್ಧ ಪೌರ್ಣಿಮೆಯನ್ನು ಆಚರಿಸಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿದಂತೆ, ಗಣ್ಯರು ಬುದ್ಧ ಪೂರ್ಣಿಮೆ ಶುಭಾಶಯ ಕೋರಿದ್ದಾರೆ.**

<><><>

ಬುದ್ಧ ಪೂರ್ಣಿಮೆ ಹಿನ್ನೆಲೆ, ಬೀದರ ಜಿಲ್ಲೆ ಅಣದೂರಿನ, ವೈಶಾಲಿ ನಗರದ, ಧಮ್ಮ ದರ್ಶನ ಬುದ್ಧ ವಿಹಾರದ, ಗುರು ಭಂತೆ ಜ್ಞಾನಸಾಗರ್ ಥೇರೋ ಅವರು, ಪ್ರದೇಶ ಸಮಾಚಾರಕ್ಕಾಗಿ, ಬುದ್ಧ ಜಯಂತಿಯ ಸಂದೇಶ ನೀಡಿದ್ದಾರೆ.

<><><>

ಭಂತೆ ಜ್ಞಾನಸಾಗರ ಧ್ವನಿ 38 ಸೆಕೆಂದುಗಳು

<><><>

ಪಾಲಿ ಭಾ ೆಯ, 'ತ್ರಿಪಿಟಕ' ದ ಅಂಗುತ್ತರ ನಿಕಾಯವನ್ನು, ನಾಡಿನ ಹಿರಿಯ ಅಭ್ಯುದಯ ಪತ್ರಕರ್ತ, ಹುಬ್ಬಳ್ಳಿಯ ಅರುಣಕುಮಾರ ಹಬ್ಬು ಹಾಗೂ ಸಹೋದರರು. ಕನ್ನಡಕ್ಕೆ ಭಾ ಾಂತರಿಸಿದ್ದಾರೆ.

ಈ ಕುರಿತು ಒಂದು ವರದಿ...

*ಬೌದ್ಧ ಧರ್ಮದ ಪ್ರಧಾನ ಹಾಗೂ ಪವಿತ್ರ ಗ್ರಂಥ, ಪಾಲಿ ಭಾ ೆಯ, 'ತ್ರಿಪಿಟಕ' ದ ಅಂಗುತ್ತರ ನಿಕಾಯವನ್ನು, ಬೆಂಗಳೂರಿನ ಮಹಾಬೋಧಿ ಟ್ರಸ್ಟ್ ಸೂಚನೆ ಮೇರೆಗೆ, ಕನ್ನಡ ಭಾ ೆಗೆ ಭಾ ಾಂತರಿಸಿದವರು, ನಾಡಿನ ಹಿರಿಯ ಅಭ್ಯುದಯ ಪತ್ರಕರ್ತ, ಹುಬ್ಬಳ್ಳಿಯ ಅರುಣಕುಮಾರ ಹಬ್ಬು ಹಾಗೂ ಸಹೋದರರು.*

*ಅರುಣಕುಮಾರ ಹಬ್ಬು ಅವರು, ತಮ್ಮ ಸಹೋದರರಾದ, ಮೋಹನದಾಸ ಹಬ್ಬು, ರಾಮಚಂದ್ರ ಹಬ್ಬು ಹಾಗೂ ಉದಯಕುಮಾರ ಹಬ್ಬು ಅವರ ಜೊತೆಗೂಡಿ, ಅಂಗುತ್ತರ ನಿಕಾಯದ, ಒಟ್ಟು ನಾಲ್ಕು ಪ್ರಮುಖ ಭಾಗಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.*

*ರಾಜ್ಯ ಸರ್ಕಾರದ ವಿಶೇ  ಅನುದಾನದಡಿ, ತ್ರಿಪಿಟಕದ ಕನ್ನಡ ಅನುವಾದ ಗ್ರಂಥವನ್ನು, ರಾಜ್ಯದ 18ನೇ ರಾಜ್ಯಪಾಲರಾಗಿದ್ದ, ವಜುಭಾಯಿ ವಾಲಾ ಬಿಡುಗಡೆಗೊಳಿಸಿದ್ದರು.*

*ಕನ್ನಡ ಭಾಷೆಗೆ, ಪ್ರಾಚೀನ ಪಾಲಿ ಭಾಷೆಯ ಗ್ರಂಥಗಳ ಭಾಷಾಂತರದ ಅಗತ್ಯತೆ ಹಾಗೂ ಮಹತ್ವದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಅಭ್ಯುದಯ ಪತ್ರಕರ್ತ, ಅರುಣ ಕುಮಾರ ಹಬ್ಬು.*

<><><>

ವಿವೇಕ ಧ್ವನಿ (53) ಅರುಣಕುಮಾರ ಹಬ್ಬು ಧ್ವನಿ (60) ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

'ಆಪರೇಷನ್ ಸಿಂಧೂರ್', ಉಗ್ರರನ್ನು ಸೆದೆ ಬಡಿಯುವ ಉದ್ದೇಶದಿಂದ ಕೈಗೊಂಡ, ಯೋಜಿತ ಕಾರ್ಯಾಚರಣೆ: ತಮ್ಮ ಗುರಿ ಕೇವಲ ಉಗ್ರರ ಅಡಗು ತಾಣಗಳಾಗಿದ್ದವು, ನಾಗರಿಕರಾಗಿರಲಿಲ್ಲ. ಪಾಕಿಸ್ಥಾನ ಆಕ್ರಮಿತ ಕಾಶ್ಮೀರದಲ್ಲಿದ್ದ, 9 ಭಯೋತ್ಪಾದಕ ನೆಲೆಗಳನ್ನು ಧ್ವಂಸ ಗೊಳಿಸಲಾಗಿದೆ ಎಂದು, ಸೇನಾ ಕಾರ್ಯಾಚರಣೆ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ತಿಳಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ನೌಕಾ ಪಡೆ ಹಾಗೂ ವಾಯು ಪಡೆಯ ಹಿರಿಯ

ಅಧಿಕಾರಿಗಳೊಂದಿಗೆ ಅವರು, ಸುದ್ದಿಗೋಷ್ಠಿ ನಡೆಸಿದರು. ಯೋಜಿತ, ಕರಾರುವಾಕ್ ಹಾಗೂ ಖಚಿತ ಮಾಹಿತಿ ಆಧರಿಸಿದ ದಾಳಿಯಲ್ಲಿ, ನೂರಾರು ಕುಖ್ಯಾತ ಭಯೋತ್ಪಾದಕರು, ಜೀವ ತೆತ್ತಿದ್ದಾರೆ, ಎಂದರು.

<><><>

ಇಂದು, ಮಧ್ಯಾಹ್ನ 12 ಗಂಟೆಗೆ, ಭಾರತ ಮತ್ತು ಪಾಕಿಸ್ಥಾನದ, ಸೇನಾ ಕಾರ್ಯಾಚರಣೆಗಳ ಮಹಾ ನಿರ್ದೇಶಕರು, ಸಮಾಲೋಚಿಸಲಿದ್ದಾರೆ.

<><><>

"ದೇಶದ ರಕ್ಷಣಾ ಪಡೆಗಳು ಹಾಗೂ ಸೇನಾ ಮುಖ್ಯಸ್ಥರಿಗೆ, ಮುಕ್ತ ಸ್ವಾತಂತ್ರ್ಯವನ್ನು ಮೊದಲ ಬಾರಿಗೆ ನೀಡಲಾಗಿದೆ" ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡ ಹಿನ್ನೆಲೆ, ಉಗ್ರಗಾಮಿಗಳ ಇರುನೆಲೆ, ಅಡಗುತಾಣ ಹಾಗೂ ಲಾಂಚ್ ಪ್ಯಾಡ್‌ಗಳನ್ನು, ಭಾರತೀಯ ಸೇನೆ, ಧ್ವಂಸ ಗೊಳಿಸಿ, ಕುಖ್ಯಾತ ಭಯೋತ್ಪಾದಕರು ಹಾಗೂ ಅವರ ಕುಟುಂಬಗಳನ್ನು, ನಿರ್ನಾಮ ಮಾಡಿವೆ ಎಂದರು. ಪಾಕಿಸ್ಥಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರು ಕರೆ ಮಾಡಿ, ಕದನ ವಿರಾಮಕ್ಕೆ ಮನವಿ ಮಾಡಿಕೊಂಡಿದ್ದರು. ಬಳಿಕ, ತಡರಾತ್ರಿ ಕದನ ವಿರಾಮ ಉಲ್ಲಂಘಿಸಿದ್ದಾರೆ. ಭಾರತೀಯ ವಾಯು ಸೇನೆ, ಸನ್ನದ್ಧವಾಗಿದ್ದು, ಸೂಕ್ತ ಪ್ರತ್ಯುತ್ತರ ನೀಡಿದೆ ಎಂದರು.

<><><>

ಭಾರತ ಶಾಂತಿಪ್ರಿಯ ರಾಷ್ಟ್ರ. ತಾನಾಗಿಯೇ ದಂಡೆತ್ತಿ ಹೋದ, ದಾಖಲೆ ಇಲ್ಲ. ಆದರೆ ಪಾಕಿಸ್ಥಾನ ನಂಬಿಕೆಗೆ ಅರ್ಹವಾದ ದೇಶವಲ್ಲ. ಕದನ ವಿರಾಮಕ್ಕೆ ಮನವಿ ಸಲ್ಲಿಸಿ, ಮೂರು ಗಂಟೆ ಬಳಿಕ, ಉಲ್ಲಂಘಿಸಿದೆ ಎಂದು, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಆಕ್ರೋಶ ವ್ಯಕ್ತ ಪಡಿಸಿದ್ದಾರೆ. 'ಆಪರೇ ʼನ್ ಸಿಂಧೂರ' ಕಾರ್ಯಾಚರಣೆ ಕೈಗೊಂಡ, ಭಾರತೀಯ ಸೈನ್ಯಕ್ಕೆ ಬೆಂಬಲ ಸೂಚಿಸಿ, ಬೆಂಗಳೂರಿನಲ್ಲಿ ಬಿಜೆಪಿ ಆಯೋಜಿಸಿದ್ದ, ತಿರಂಗಾ ಯಾತ್ರೆಯಲ್ಲಿ ಅವರು ಪಾಲ್ಗೊಂಡು, ಮಾತನಾಡಿದರು, ವಿದ್ಯಾರಣ್ಯಪುರದ ಎನ್.ಐ.ಟಿ. ಆಟದ ಮೈದಾನದಿಂದ, ಸಹಕಾರ ನಗರದ ಗಣೇಶ ದೇವಸ್ಥಾನದ ವರೆಗೆ ನಡೆದ ತಿರಂಗಾ ಯಾತ್ರೆಯಲ್ಲಿ, ವಿಧಾನಪರಿ ʼತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಹಿಂದು ಮಹಾಸಾಗರದಲ್ಲಿ, ಸಂಶಯಾಸ್ಪದ ವ್ಯಕ್ತಿ ಅಥವಾ ದೋಣಿ ಕಂಡು ಬಂದಲ್ಲಿ, ಕೂಡಲೇ ಕರಾವಳಿ ಕಾವಲು ಪಡೆ ಅಥವಾ ಮೀನುಗಾರಿಕಾ ಇಲಾಖೆಗೆ, ತಕ್ಷಣ ಮಾಹಿತಿ ನೀಡುವಂತೆ, ಮೀನುಗಾರಿಕೆ ಇಲಾಖೆಯ, ಉತ್ತರಕನ್ನಡ ಜಿಲ್ಲೆ ಜಂಟಿ ನಿರ್ದೇಶಕ, ಬಬೀನ್ ಬೋಪಣ್ಣ ಮೀನುಗಾರರಿಗೆ ತಿಳಿಸಿದ್ದಾರೆ. ಇಂದು 'ಆಪರೇ ʼನ್ ಅಭ್ಯಾಸ್' ಅಣಕು ಕಾರ್ಯಾಚರಣೆ ನಡೆಯಲಿರುವ ಹಿನ್ನೆಲೆ, ಕಾರವಾರದಲ್ಲಿ ಅವರು, ಮೀನುಗಾರರ ಹಾಗೂ ದೋಣಿಗಳ ಮಾಲಿಕರ ಸಭೆ ನಡೆಸಿ, ಸಹಕಾರ ಕೋರಿದರು.

<><><>

ಉತ್ತರಕನ್ನಡ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಸುದ್ದಿಗೋಷ್ಠಿ ನಡೆಸಿ, ಇಂದು ರಾತ್ರಿ 7.30 ರಿಂದ 8ರ ಮಧ್ಯೆ, ಸೈರನ್ ಮೊಳಗಿಸಲಾಗುವುದು. ಜನ ಭಯಭೀತರಾಗಬಾರದು. ಕೂಡಲೇ ಸಂಪೂರ್ಣ ಬ್ಲ್ಯಾಕ್ ಔಟ್ ಮಾಡಿ, ಸಹಕರಿಸುವಂತೆ, ತಿಳಿಸಿದರು.

<><><>

ಬಾಗಲಕೋಟೆ ಜಿಲ್ಲಾಧಿಕಾರಿ ಕೆ.ಎಂ.ಜಾನಕಿ, ತುರ್ತು ಪರಿಸ್ಥಿತಿ ಎದುರಾದಲ್ಲಿ, ಸಾರ್ವಜನಿಕರ ರಕ್ಷಣೆಗೆ, ಜಿಲ್ಲಾಡಳಿತ ಸನ್ನದ್ಧವಾಗಿದೆ ಎಂದು ತಿಳಿಸಿದ್ದಾರೆ. ವಿವಿಧ ತಾಲೂಕುಗಳ ತೆಹಸೀಲ್ದಾರರೊಂದಿಗೆ ಅವರು, ಭದ್ರತೆ, ಕಾನೂನು–ಸುವ್ಯವಸ್ಥೆ ಅವಲೋಕನ ಸಭೆ, ನಡೆಸಿದರು.

<><><>

ದಕ್ಷಿಣಕನ್ನಡ ಜಿಲ್ಲೆ, ಕಡಬ ತಾಲೂಕಿನ ಹೊಸ್ಮಠ ನಿವಾಸಿ, ಪಿಲಿಕುಳ ಶಿವರಾಮ ಕಾರಂತ ನಿಸರ್ಗಧಾಮದ, ಸಸ್ಯಶಾಸ್ತ್ರ ವಿಭಾಗದಲ್ಲಿ ಪ್ರಧಾನ ವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದ, ಡಾಕ್ಟರ್ ಸೂರ್ಯಪ್ರಕಾಶ ಶೆಣೈ ನಿಧನರಾಗಿದ್ದಾರೆ. ಅವರಿಗೆ 60 ವರ್ಷ ವಯಸ್ಸಾಗಿತ್ತು. ಪಶ್ಚಿಮಘಟ್ಟದ ಸಸ್ಯ ಸಂಪತ್ತಿಗೆ ಜೀವ ನೀಡುವಂತೆ, ಪಿಲಿಕುಳದ 85 ಎಕರೆ ಪ್ರದೇಶದಲ್ಲಿ ಸ್ಥಾಪಿತವಾಗಿರುವ, ಸಸ್ಯಕಾಶಿ ಸಸ್ಯೋದ್ಯಾನ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪಶ್ಚಿಮಘಟ್ಟದ ಅರಣ್ಯಪ್ರದೇಶಗಳಿಗೆ ಭೇಟಿ ನೀಡಿ, ಬೀಜ ಸಂಗ್ರಹಿಸಿ ಗಿಡಗಳನ್ನು ಬೆಳೆಸುವ ಮೂಲಕ, ಪರಿಸರ ಮತ್ತು ಜೀವ ವೈವಿಧ್ಯ ರಕ್ಷಣೆಗೆ ಅಪಾರ ಕೊಡುಗೆ ನೀಡಿದ್ದರು. ಅವರ ಅನೇಕ ವೈಜ್ಞಾನಿಕ ಲೇಖನಗಳು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಗಣ್ಯರು ಸಂತಾಪ ವ್ಯಕ್ತ ಪಡಿಸಿದ್ದಾರೆ.

<><><>

ಈ ಬಾರಿ, ನೈಋತ್ಯ ಮುಂಗಾರು ಮಳೆ, ವಾಡಿಕೆಗಿಂತ ಐದು ದಿನ ಮುಂಚಿತವಾಗಿಯೇ ಬರಲಿದೆ ಎಂದು, ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇದೇ 27 ರಂದು, ಕೇರಳ ಕರಾವಳಿಗೆ ಮುಂಗಾರು ಆಗಮಿಸುವ ನಿರೀಕ್ಷೆಯಿದೆ. ಕಳೆದ ಐದು ವರ್ಷಗಳಲ್ಲಿ ಅತ್ಯಂತ ಮುಂಚೆ ಈ ಬಾರಿ ಮಳೆಯ ಆಗಮನವಾಗಲಿದೆ. ಕೃಷಿ, ಜಲಾಶಯ ಭರ್ತಿಗೆ ಈ ಮಳೆ, ಶೇಕಡ 70ರಷ್ಟು ಅಗತ್ಯತೆಯನ್ನು, ಮುಂಗಾರು ಮಳೆ ಪೂರೈಸುತ್ತದೆ.

<><><>

ಈ ಬಾರಿ ವಾಡಿಕೆಗಿಂತ, ಮೊದಲು ಹಾಗೂ ಹೆಚ್ಚು ಮಳೆಯಾಗುವ ಸಂಭವವಿದ್ದು, ಯಾವುದೇ ಪ್ರಾಣ ಹಾಗೂ ಆಸ್ತಿ ಹಾನಿಯಾಗದಂತೆ, ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ, ಉಡುಪಿ ಜಿಲ್ಲೆ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು, ಬುದ್ಧ ಪೂರ್ಣಿಮೆ: ನಾಡಿನಾದ್ಯಂತ ಶ್ರದ್ಧಾ ಭಕ್ತಿಯ, ವೈಶಾಖ ಜಯಂತ್ಯುತ್ಸವ.
- ‘ಆಪರೇಷನ್ ಸಿಂಧೂರ್’: ಉಗ್ರರ ಹೆಡೆಮುರಿ ಕಟ್ಟಲು, ಯೋಜಿತ ಕಾರ್ಯಾಚರಣೆ – ಲೆಫ್ಟಿನೆಂಟ್ ಜನರಲ್, ರಾಜೀವ್ ಘಾಯ್.
- ದೇಶದ ರಕ್ಷಣಾ ಪಡೆಗಳು, ಸೇನಾ ಮುಖ್ಯಸ್ಥರಿಗೆ, ಪ್ರಥಮ ಬಾರಿಗೆ ಮುಕ್ತ ಸ್ವಾತಂತ್ರ್ಯ – ಪ್ರಲ್ಹಾದ ಜೋಶಿ.
- ನೈಋತ್ಯ ಮುಂಗಾರು: ವಾಡಿಕೆಗಿಂತ ಐದು ದಿನ ಮುಂಚೆ, ಕೇರಳ ಕರಾವಳಿ ತಲುಪುವ ನಿರೀಕ್ಷೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>